**ಕನ್ನಡ ಸಂಭ್ರಮ**

# ಕರುನಾಡ ಅರಸೊತ್ತಿಗೆಗಳು



## ಇತಿಹಾಸದ ಅರಿವಿಗೆ ಅಪೂರ್ವ ಚಿತ್ರಪಟ

**ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳು ನಾಡಿನ ಸಿರಿವಂತಿಕೆಯನ್ನು ಹೆಚ್ಚಿಸಿವೆ. ಆ ರಾಜಮನೆತನಗಳ ಮಾಹಿತಿ ಹೊತ್ತ ಪಟವೊಂದು ಮಧ್ಯಕರ್ನಾಟಕ ದಾವಣಗೆರೆಯಲ್ಲಿ ಸಿದ್ಧಗೊಂಡಿದೆ. ಆ ಪಟದ ವಿಶೇಷಗಳು ಒಂದೆರಡಲ್ಲ...**

■ **ಸುಮಾ ಬಿ.**

'ಇತಿಹಾಸ' ಬಹುತೇಕರ ಸ್ಮರಣಶಕ್ತಿಗೆ ಸವಾಲೊಡ್ಡುವ ವಿಷಯ. ಪರೀಕ್ಷೆಗೆಂದು ಓದಿ ಅದನ್ನು ಅಲ್ಲಲ್ಲೇ ಮರೆತವರೇ ಹೆಚ್ಚು. ರಾಜರ ಆಡಳಿತ, ಕಾಲಮಾನ, ರಾಜಧಾನಿ, ವಂಶಾವಳಿ – ಇವೆಲ್ಲ ಸ್ಮೃತಿಪಟಲದಲ್ಲಿ ಉಳಿಯುವುದು ವಿರಳ. ವಿದ್ಯಾರ್ಥಿಗಳಿಗಂತೂ ಪರೀಕ್ಷಾ ವೇಳೆಗಷ್ಟೇ 'ಇತಿಹಾಸ' ನೆನಪಾದರೆ ಸಾಕು ಎನ್ನುವ ಮನೋಭಾವ. ಪುಸ್ತಕ ಮುಚ್ಚಿದೊಡನೆ ನೆನಪೂ ಮುಚ್ಚುತ್ತದೆ. ಹೀಗಿರುವಾಗ, ಗೋಡೆಯಲ್ಲೊಂದು ಪಟ ಇತಿಹಾಸವನ್ನು ಸಾರಿ ಹೇಳುವಂತಾದರೆ ಎಷ್ಟು ಚೆನ್ನಾಗಿರುತ್ತದಲ್ಲವೇ? ಪಟವನ್ನು ಆಗಾಗ ನೋಡುತ್ತ ರಾಜರ ಇತಿಹಾಸವನ್ನು ಮನಕ್ಕೆ ಇಳಿಸಿಕೊಳ್ಳಬಹುದಲ್ಲವೇ? ಮರೆತುಹೋದರೆ ತಕ್ಷಣ ಕಣ್ಣು ಹಾಯಿಸಿ ನೆನಪಿನ ಶಕ್ತಿಯನ್ನು ಚುರುಕುಗೊಳಿಸಬಹುದಲ್ಲವೇ? ಆದರೆ, ಇದು ಸಾಧ್ಯವೇ ಎಂದು ಅನುಮಾನ ಪಡುವವರಿಗೆ 'ಸಾಧ್ಯ' ಎಂದು ಹೇಳುತ್ತ ಮೈದಳೆದಿದೆ 40X8 ಅಡಿ ಅಳತೆಯ ಬೃಹತ್ ಪಟ.

ಕರುನಾಡನ್ನು ಆಳಿದ 130 ರಾಜಮನೆತನಗಳನ್ನು ಸವಿವರವಾಗಿ, ಕ್ರಮಬದ್ಧವಾಗಿ ಕಟ್ಟಿಕೊಡುವ ಈ ಪಟ ಇತಿಹಾಸಕಾರರ ಆಸಕ್ತಿ ಕೆರಳುವಂತೆ ಮಾಡಿದೆ. ಸತತ ಒಂದು ವರ್ಷದ ಶ್ರಮದ ಪ್ರತಿಫಲವಾಗಿ 'ಕರುನಾಡ ಅರಸೊತ್ತಿಗೆಗಳು' ಪಟ ರೂಪುಗೊಂಡಿದೆ. ಕರ್ನಾಟಕ ಇತಿಹಾಸದ ಒಂದಿಡೀ ಪುಸ್ತಕವನ್ನೇ ಪಟದಲ್ಲಿ ಒಡಮೂಡಿಸುವ ಮೂಲಕ ವಿದ್ಯಾರ್ಥಿಗಳ, ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವವರ ಕಲಿಕೆಯ ಹಾದಿಯನ್ನು ಸುಲಭಗೊಳಿಸಿದ್ದಾರೆ, ದಾವಣಗೆರೆಯ ತೂಕ ಮತ್ತು ಅಳತೆ ಸಾಧನೆಗಳ ಸಂಗ್ರಹಕಾರ ಬಸವರಾಜ್ ಯಳಮಲ್ಲಿ.

'ಬುಕ್ ಆನ್ ಬೋರ್ಡ್' ಚಿಂತನೆಯಡಿ ಅಚ್ಚಾಗಿರುವ ಈ ಪಟ ಸಾಮಾನ್ಯ ಶಕ ಪೂರ್ವ 270ರಿಂದ ಸಾಮಾನ್ಯ ಶಕ 1947ರವರೆಗೆ, ಸುಮಾರು 2,217 ವರ್ಷಗಳ ಅವಧಿಯಲ್ಲಿ ಕರ್ನಾಟಕವನ್ನಾಳಿದ ರಾಜವಂಶಗಳ ಹಲವು ಮಾಹಿತಿಯನ್ನು ದಾಟಿಸುತ್ತದೆ.

ಇದಕ್ಕಾಗಿ ಇತಿಹಾಸಕ್ಕೆ ಸಂಬಂಧಿಸಿದ 300ಕ್ಕೂ ಹೆಚ್ಚು ಪುಸ್ತಕಗಳನ್ನು ಅಧ್ಯಯನ ಮಾಡಿ, ಅದರಲ್ಲಿ ಸೂಕ್ತವೆನಿಸಿದ 65 ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡು ರಾಜವಂಶಗಳ ಕಾಲಮಾನಕ್ಕೆ ತಕ್ಕಂತೆ ಮಾಹಿತಿಯನ್ನು ಪಟದಲ್ಲಿ ಪೋಣಿಸಲಾಗಿದೆ. ಶಾಲೆ, ಕಾಲೇಜು, ಸಭೆ, ಸಮಾರಂಭಗಳಲ್ಲಿ ಪ್ರದರ್ಶಿಸುವ ಉದ್ದೇಶದಿಂದ ಈ ಪಟವನ್ನು ತಯಾರಿಸಲಾಗಿದ್ದು, ಬಟ್ಟೆ, ಫ್ಲೆಕ್ಸ್ ಮೇಲೆ ಇದನ್ನು ಮೂಡಿಸಬಹುದಾಗಿದೆ. ಬೇಕೆಂದಾಗ ಕೊಠಡಿಯಲ್ಲಿ ಅಥವಾ ಹೊರಾಂಗಣದಲ್ಲಿ ಪ್ರದರ್ಶಿಸಿ ಬಳಿಕ ಮಡಚಿಡಲೂಬಹುದು.

### ಪಟದಲ್ಲಿವೆ ಇವೆಲ್ಲ...

ಶಾತವಾಹನರು, ಮಹಾರಥಿಗಳು, ಬನವಾಸಿ ಚುಟುಗಳು, ಪುನ್ನಾಟದ ಅರಸರು, ತುಳುನಾಡ ಅಳುಪರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ಕಳಚೂರಿಗಳು, ತಲಕಾಡಿನ ಗಂಗರು, ವೇಣೂರಿನ ಅಜಿಲರಸರು, ಬಹಮನಿ ಸುಲ್ತಾನರು... ಹೀಗೆ ಕರ್ನಾಟಕವನ್ನಾಳಿದ ಪಾಳೆಗಾರರು, ಮರಿ ಪಾಳೆಗಾರರು, ರಾಜವಂಶಗಳ ಮಾಹಿತಿ ಪಟದಲ್ಲಿ ಅಡಕವಾಗಿದೆ. ರಾಜರ ಆಳ್ವಿಕೆಯ ಕಾಲಮಾನ, ಪ್ರದೇಶ, ಆಳ್ವಿಕೆ ನಡೆಸಿದ ಅರಸರು, ರಾಜಧಾನಿ, ರಾಜಮನೆತನ ಯಾವ ಕಾರಣಕ್ಕೆ ಅಂತ್ಯಗೊಂಡಿತು ಎಂಬ ಮಾಹಿತಿಯನ್ನು ಪಟ ನೀಡುತ್ತದೆ.

ಪಟದ ಮೇಲ್ಭಾಗ ಹಾಗೂ ಕೆಳಭಾಗದಲ್ಲಿ ಪ್ರತಿ 5 ವರ್ಷಗಳ ಕಾಲಮಾನವನ್ನು ಮುದ್ರಿಸಲಾಗಿದ್ದು, ರಾಜವಂಶಗಳ ಕಾಲವನ್ನು ಸುಲಭವಾಗಿ ಗ್ರಹಿಸಲು ಸಹಕಾರಿಯಾಗಿದೆ. ಪಟದಲ್ಲಿರುವ

